ಇ) ನಿರ್ವಹಣೆಗೆ ನಿಗದಿಪಡಿಸಿದ ಅನುದಾನ ಮತ್ತು ವೆಚ್ಚ ಈ ಕೆಳಕಂಡಂತಿದೆ.

ರೂ.ಲಕ್ಷಗಳಲ್ಲಿ

ಕ್ರ.ಸಂ.	ವರ್ಷ	ಅನುದಾನ ಹಂಚಿಕೆ	ವೆಚ್ಚ
1	2004–05	1028.82	850.52
2	2005–06	1080.27	854.03
3	2006–07 (ಫೆಬ್ರವರಿ 2007ರ ಅಂತ್ಯಕ್ಕೆ)	1734.30	424.20

ಈ) ಕೆರೆಗಳ ಸಮರ್ಪಕ ನಿರ್ವಹಣೆಗೆ ಹೆಚ್ಚಿನ ಅನುದಾನವನ್ನು ಒದಗಿಸುವ ಬಗ್ಗೆ ಮತ್ತು ಕೆರೆಗಳ ಪುನರ್ಜೀವನಕ್ಕಾಗಿ ಸೂಕ್ತ ಕಾರ್ಯಕ್ರಮವನ್ನು ರೂಪಿಸುವ ಬಗ್ಗೆ ಸರ್ಕಾರವು ಪರಿಶೀಲಿಸುವುದು.

1363 (1880) ಶ್ರೀ ಪಾಟೀಲ ಬಿ.ಆರ್ (ಆಳಂದ) :– ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಅತೀ ಹೆಚ್ಚಿಗೆ ಕೆರೆಗಳನ್ನು ಕಟ್ಟಲು ಸ್ಥಳಾವಕಾಶ ಇರುವುದನ್ನು ಸರ್ಕಾರ ಗಮನಿಸಿದೆಯೇ;

ಆ) ಬಚಾವತ ಬಿ–ಸ್ಕೀಮಿನಲ್ಲಿ ಆಂಧ್ರ ಸರ್ಕಾರ ಕಾಮಗಾರಿಗಳನ್ನು ಪ್ರಾರಂಭ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಆಂಧ್ರ ಪ್ರದೇಶ ಸರ್ಕಾರ ಕಾಮಗಾರಿಗಳನ್ನು ಕೈಗೊಳ್ಳುವಾಗ ಕರ್ನಾಟಕ ಸರಕಾರ ಆಕ್ಷೇಪಣಾ ಅರ್ಜಿ ಹಾಕಲಿಲ್ಲವೇ;

ಈ) ಆಂಧ್ರದವರು ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದರೆ ಯಾಕೆ ಕಾಮಗಾರಿಗಳನ್ನು ಕೈಗೊಳ್ಳಬಾರದು?

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು) :

ಅ) ಬಂದಿದೆ.

ಆ) ಬಂದಿದೆ.

ಇ) ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣಕ್ಕೆ ಆಂಧ್ರ ಪ್ರದೇಶ ಸರ್ಕಾರವು ಕೃಷ್ಣಾ ಕಣಿವೆಯಲ್ಲಿನ ಹೆಚ್ಚುವರಿ ನೀರನ್ನು ಉಪಯೋಗಿಸಲು ನಿರ್ಮಿಸುತ್ತಿರುವ ಶಾಶ್ವತ ಯೋಜನೆಗಳನ್ನು ನಿರ್ಮಿಸದಂತೆ/ಮುಂದುವರಿಸದಂತೆ ನಿರ್ದೇಶನ ನೀಡಲು ಪ್ರಾರ್ಥಿಸಿ ದಿನಾಂಕ 19.05.2005 ರಂದು ಐ.ಎ.1/2005 ಅರ್ಜಿಯನ್ನು ಪ್ರಸಕ್ತ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣಕ್ಕೆ ಸಲ್ಲಿಸಲಾಗಿತ್ತು. ದಿನಾಂಕ : 9.6.2006 ರಂದು ನ್ಯಾಯಾಧಿಕರಣವು ಸದರಿ ಅರ್ಜಿಯ ಬಗ್ಗೆ ಆದೇಶವನ್ನು ನೀಡಿರುತ್ತದೆ. ಈ ಆದೇಶದಂತೆ,

(i) ಆಂಧ್ರ ರಾಜ್ಯವು ಯಾವುದೇ ಹೊಸ ಯೋಜನೆಗಳನ್ನು ಬೇರೆ ರಾಜ್ಯಗಳು ಮತ್ತು ನ್ಯಾಯಾಧಿಕರಣದ ಗಮನಕ್ಕೆ ತರದೆ ಪ್ರಾರಂಭಿಸಲು ಬರುವುದಿಲ್ಲ,

(ii) ಪೂರ್ವಬಳಕೆ ಮತ್ತು ವಚನಬದ್ಧತೆ (Prior utilization/committed) ಆಧಾರದ ಮೇಲೆ ವಿವಾದಿತ ಯೋಜನೆಗಳ ಅಡಿಯಲ್ಲಿ ಹೆಚ್ಚುವರಿ ನೀರಿನ ಬಳಕೆ ಮೇಲೆ ಆಂಧ್ರ ಪ್ರದೇಶವು ತನ್ನ ಹಕ್ಕನ್ನು ಸಾಧಿಸಲು ಸಾಧ್ಯವಿಲ್ಲ.

(iii) ಆಂಧ್ರಪ್ರದೇಶವು ಬಳಸಲು ಉದ್ದೇಶಿಸಿರುವ ಹೆಚ್ಚುವರಿ ನೀರು ಸಹ ಕಣಿವೆ ರಾಜ್ಯಗಳ ಪಾಲನ್ನು ನಿರ್ಧರಿಸಲು ಪರಿಗಣಿಸಲಾಗುವುದು.

(iv) ಅರ್ಜಿದಾರರು ಹೆಚ್ಚುವರಿ ನೀರಿನ ಅಡಿಯಲ್ಲಿ ಯೋಜನೆಗಳನ್ನು ನಿರ್ಮಿಸಲು ಅರ್ಜಿ ಸಲ್ಲಿಸಿದಲ್ಲಿ ನ್ಯಾಯಾಧಿಕರಣವು ಅಂತಹ ಮನವಿಯನ್ನು ಪರಿಗಣಿಸುವುದು.

ಈ) ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ (ಬಚಾವತ್ ವರದಿ) ಅಂತಿಮ ಆದೇಶದಲ್ಲಿ ಹೆಚ್ಚುವರಿ ನೀರು ಬಳಸಲು ಆಂಧ್ರ ಪ್ರದೇಶಕ್ಕೆ ಸ್ವಾತಂತ್ರ್ಯವನ್ನು ನೀಡಿತ್ತು. ಆದರೆ, ಅಂತಹ ಬಳಕೆಯಿಂದ ಆಂಧ್ರ ಪ್ರದೇಶಕ್ಕೆ ಯಾವುದೇ ಹಕ್ಕು ಇರುವುದಿಲ್ಲ ಎಂದೂ ಸಹ ನ್ಯಾಯಾಧಿಕರಣವು ತಿಳಿಸಿರುತ್ತದೆ.

ಹೆಚ್ಚುವರಿ ನೀರನ್ನು ಬಳಸಿ ಕರ್ನಾಟಕ ರಾಜ್ಯವು ಯೋಜನೆಗಳನ್ನು ತೆಗೆದುಕೊಳ್ಳಲು ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ (ಬಚಾವತ್ ವರದಿ) ಆದೇಶದಲ್ಲಿ ಅವಕಾಶವಿರುವುದಿಲ್ಲ. ಕರ್ನಾಟಕದ ಐ.ಎ.1/2005ರ ಅರ್ಜಿಯ

ದಿನಾಂಕ : 09.06.2006ರ ತೀರ್ಪಿನಲ್ಲಿ ಈಗಿನ ನ್ಯಾಯಾಧಿಕರಣವು ಆಂಧ್ರಪ್ರದೇಶವು ಬಳಸಲು ಉದ್ದೇಶಿಸಿರುವ ಹೆಚ್ಚುವರಿ ನೀರು ಸಹ ಕಣಿವೆ ರಾಜ್ಯಗಳ ಪಾಲನ್ನು ನಿರ್ಧರಿಸಲು ಪರಿಗಣಿಸಲಾಗುವುದೆಂದು ತಿಳಿಸಿದೆ. ನ್ಯಾಯಾಧಿಕರಣದ ಮುಂದೆ ನಡವಳಿಗಳು ದೀರ್ಘಕಾಲ ನಡೆದಲ್ಲಿ ಅರ್ಜಿದಾರರು ಯೋಜನೆಗಳನ್ನು ನಿರ್ಮಿಸಲು ಅರ್ಜಿ ಸಲ್ಲಿಸಿದಲ್ಲಿ ನ್ಯಾಯಾಧಿಕರಣವು ಅಂತಹ ಮನವಿಯನ್ನು ಪರಿಗಣಿಸಲಾಗುವುದೆಂದು ಸಹ ತಿಳಿಸಿದೆ. ಈ ಹಿನ್ನೆಲೆಯಲ್ಲಿ ಸ್ಕೀಂ ಬಿ ಅಡಿಯಲ್ಲಿ ಹೆಚ್ಚುವರಿ ನೀರನ್ನು ಉಪಯೋಗಿಸಲು ಯೋಜನೆಗಳನ್ನು ರಾಜ್ಯವು ಕೈಗೆತ್ತಿಕೊಳ್ಳುವ ಬಗ್ಗೆ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ ಅನುಮತಿ ಕೋರಿ ಅರ್ಜಿ ಸಲ್ಲಿಸಲು ರಾಜ್ಯದ ನ್ಯಾಯವಾದಿಗಳೊಡನೆ ಚರ್ಚಿಸಿ, ಮುಂದಿನ ಕ್ರಮದ ಬಗ್ಗೆ ಪರಿಶೀಲಿಸಲಾಗುವುದು.

1365 (1452) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಣಕೀಕೃತ ಪಹಣಿ ಪತ್ರಿಕೆಯ ಪ್ರತಿಯನ್ನು ಪಡೆಯಲು ಸರ್ಕಾರವು ನಿಗದಿಪಡಿಸಿರುವ ರೂ.15.00 ಶುಲ್ಕವನ್ನು ಕಡಿಮೆಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸಂಬಂಧ ಸರ್ಕಾರ ಕೈಗೊಳ್ಳುವ ಕ್ರಮಗಳೇನು;

ಇ) ಪ್ರಸ್ತುತ ಪಹಣಿ ಪತ್ರಿಕೆಯನ್ನು ಪಡೆಯಲು ಗ್ರಾಮಾಂತರದ ಜನರು ತಾಲ್ಲೂಕು ಕೇಂದ್ರಕ್ಕೆ ಬರುವುದನ್ನು ಬದಲಾವಣೆಗೊಳಿಸಿ ಹೋಬಳಿ ಮತ್ತು ಪಂಚಾಯತ್ ಮಟ್ಟದಲ್ಲೇ ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) "ನೆಮ್ಮದಿ" ಯೋಜನೆಯಡಿ ಪ್ರಾರಂಭಿಸಲಾಗಿರುವ ಹೋಬಳಿ ಮಟ್ಟದ ಟೆಲಿಸೆಂಟರ್‌ಗಳಲ್ಲಿ ಪಹಣಿಗಳನ್ನು ವಿತರಿಸಲಾಗುತ್ತಿದೆ. ಇಂದಿನವರೆಗೆ, 710 ನೆಮ್ಮದಿ ಟೆಲಿಸೆಂಟರ್‌ಗಳನ್ನು ಹೋಬಳಿ ಮಟ್ಟದಲ್ಲಿ ಕಾರ್ಯಾಚರಣೆಗೊಳಿಸಲಾಗಿದೆ.